# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS


Ph No. 080-22291150
Fax No. 080-22223558
E-mail: pgtrustkptcl@gmail.com

6th Floor,
Kaveri Bhavan,
Bangalore-560009.


ಸಂಖ್ಯೆ: ಕೆಇಪಿಜಿಟಿ/ಕೆಸಿಒ123/ಪಿ7/2020-21/804-10 ದಿನಾಂಕ: 05 MAR 2021

ಲಗತ್ತು: 1 ಡಿ.

ಗೆ,

1. ನಿರ್ದೇಶಕರು(ವಾಣಿಜ್ಯ),
   ಪಿಸಿಕೆಎಲ್.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ.
3. ಮುಖ್ಯ ಆರ್ಥಿಕ ಅಧಿಕಾರಿ,
   ಚಾವಿಸನಿ/ಹುವಿಕಂ/ಗುವಿಕಂ/ಮವಿಕಂ.
4. ಆರ್ಥಿಕ ಸಲಹೆಗಾರರು(ಎನ್‌ಡಿಸಿಪಿಎಸ್),
   ಕವಿಪ್ರನಿನಿ.

ಮಾನ್ಯರೇ,

ವಿಷಯ: ದಿನಾಂಕ 31.03.2021ರ ಅಂತ್ಯಕ್ಕೆ ಕವಿಪ್ರನಿನಿ ಮತ್ತು ವಿಸಕಂಗಳ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಪ್ರಾತ್ಯಕ್ಷಿಕ ಮೌಲ್ಯಮಾಪನ (Actuarial Valuation) ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ. ಡಿಇ 14 ಪಿಎಸ್‌ಆರ್ 2002 ದಿನಾಂಕ 31.05.2002. (ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕವಿಪ್ರನಿನಿ ಉದ್ಯಮಗಳು ಮತ್ತು ಅದರ ಸಿಬ್ಬಂದಿಯು ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) ನಿಯಮಗಳು 2002 (ಎರಡನೇ ವರ್ಗಾವಣೆ ಯೋಜನೆ).
2. ಸರ್ಕಾರದ ಆದೇಶ ಸಂಖ್ಯೆ. ಡಿಇ 15 ಪಿಎಸ್‌ಆರ್ 2002 ದಿನಾಂಕ 19.12.2002.
3. ಟ್ರಸ್ಟ್ ಆದೇಶ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ7/2019-20/ಸಿವೈಎಸ್-13 ದಿನಾಂಕ 30.10.2019.

*********

1. ಉಲ್ಲೇಖದಲ್ಲಿನ ಸರ್ಕಾರ/ಟ್ರಸ್ಟ್ ಆದೇಶಗಳ ಕಡೆ ಗಮನ ಕೋರಿದೆ.

2. ಉಲ್ಲೇಖ-1 & 2ರಲ್ಲಿನ ಸರ್ಕಾರದ ಅಧಿಸೂಚನೆ/ಆದೇಶಗಳಲ್ಲಿ ಸೂಚಿಸಿದಂತೆ ಎರಡನೇ ವರ್ಗಾವಣೆ ಯೋಜನೆಯಡಿ ನಿರ್ದಿಷ್ಟಪಡಿಸಿದ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ ಕುರಿತಂತೆ ಕವಿಪ್ರನಿನಿ ಮತ್ತು ವಿಸಕಂಗಳು ವಂತಿಗೆಯನ್ನು ನೀಡಬೇಕಿರುತ್ತದೆ.

3. ಇದಕ್ಕನುಸಾರವಾಗಿ, ಲೆಕ್ಕಪತ್ರ ಗುಣಮಟ್ಟ (Accounting Standard) IND AS 19 ಅನುಸಾರ ದಿನಾಂಕ 31.03.2021ರಲ್ಲಿರುವಂತೆ ಕವಿಪ್ರನಿನಿ/ವಿಸಕಂಗಳ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳ (ಪಿಂಚಣಿ ಮತ್ತು ಉಪದಾನ) ಪ್ರಾತ್ಯಕ್ಷಿಕ ಮೌಲ್ಯಮಾಪನ ಕೈಗೊಳ್ಳಬೇಕಿರುತ್ತದೆ.

4. ಆದ್ದರಿಂದ, ಈ ಪತ್ರಕ್ಕೆ ಲಗತ್ತಿಸಿದ ಪ್ರೊಫಾರ್ಮ 1 ರಿಂದ 7ರಲ್ಲಿ ಲೆಕ್ಕಘಟಕವಾರು ಕ್ರೋಢೀಕರಿಸಿದ ಸಿಬ್ಬಂದಿ/ಪಿಂಚಣಿದಾರರ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ. ಮುಂದುವರೆದು, ಪ್ರೊಫಾರ್ಮ 1 ರಿಂದ 7ಗಳನ್ನು ನಿಮ್ಮ ಕಂಪನಿಯ ಎಲ್ಲ ಲೆಕ್ಕಘಟಕಗಳು ನಿಗಮ ಕಛೇರಿಗೆ ಸಲ್ಲಿಸಬೇಕಿರುವ ಮಾರ್ಚ್ ಅಂತಿಮ ಲೆಕ್ಕಗಳು 2021ಕ್ಕೆ **"ಅನುಬಂಧ"**ಗಳನ್ನಾಗಿ ನಿಗದಿಪಡಿಸುವುದು. ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸುವ ಸಲುವಾಗಿ ನಿಮ್ಮ ಕಂಪನಿಯ ಕ್ರೋಢೀಕೃತ ಪ್ರೊಫಾರ್ಮ 1 ರಿಂದ 7 ತಃಖ್ತೆಗಳನ್ನು ಸಾಫ್ಟ್ ಪ್ರತಿಯಲ್ಲಿ ಏಪ್ರಿಲ್-2021ರ ಮಾಹೆಯಲ್ಲಿ ಈ ಕಛೇರಿಗೆ ಕಳುಹಿಸಲು ವ್ಯವಸ್ಥೆ ಮಾಡುವುದು.

5. IND AS 19ರ ಅವಶ್ಯಕತೆಯಂತೆ ನಿವೃತ್ತಿ ಸೌಲಭ್ಯಗಳ ಕುರಿತಂತೆ ಕಂಪನಿಗಳು ಪ್ರಾತ್ಯಕ್ಷಿಕ ಮೌಲ್ಯಮಾಪನದ ಫಲಿತಾಂಶವನ್ನು ಲೆಕ್ಕಪತ್ರಗಳಲ್ಲಿ ಅವಕಾಶ (Provision) ಮಾಡಬೇಕಿರುತ್ತದೆ. ಆದ್ದರಿಂದ, ಮಾಹಿತಿಯನ್ನು ಏಪ್ರಿಲ್-2021ರ ಅಂತ್ಯದೊಳಗೆ ಕಳುಹಿಸಿದ್ದಲ್ಲಿ, ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯನ್ನು ಶೀಘ್ರವಾಗಿ ಪಡೆದುಕೊಂಡು ಲೆಕ್ಕಪತ್ರಗಳಲ್ಲಿ ಸೂಕ್ತ ಅವಕಾಶ ಮಾಡುವ ಜೊತೆಗೆ ಪರಿಷ್ಕೃತ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ಅನುಷ್ಠಾನಗೊಳಿಸುವಂತೆ ಕವಿಪ್ರನಿನಿ/ವಿಸಕಂಗಳಿಗೆ ತಿಳಿಸಲು ಅನುಕೂಲವಾಗುತ್ತದೆ.

6. ದಿನಾಂಕ 31.03.2021ರ ಅಂತ್ಯಕ್ಕಿರುವಂತೆ ಪ್ರಾತ್ಯಕ್ಷಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪ್ರೊಫಾರ್ಮ 1 ರಿಂದ 7 ರ macros ಅಳವಡಿಸಿದ Excel ಕಡತವನ್ನು ಹಾಗೂ ಸದರಿ ಕಡತವನ್ನು ಭರ್ತಿ ಮಾಡುವ ಸೂಚನೆಗಳನ್ನು ಕವಿಪ್ರನಿನಿಯ ವೆಬ್‌ತಾಣದಲ್ಲಿ ಪ್ರಕಟಿಸಲಾಗಿರುತ್ತದೆ. (path->www.kptcl.com->eprasarana->Administrative-> KPTCLand ESCOMs' Pension & Gratuity Trust->KEPGT Orders/Circulars).

7. ಮಾರ್ಚ್ ಅಂತಿಮ ಲೆಕ್ಕಗಳು 2021 ಜೊತೆ ಲೆಕ್ಕಘಟಕಗಳು ಸಲ್ಲಿಸುವ ಸಿಬ್ಬಂದಿ/ಪಿಂಚಣಿದಾರರ ಮಾಹಿತಿಗಳನ್ನು ಕಂಪನಿಗಳ ಸಂಬಂಧಪಟ್ಟ ನಿಗಮ ಕಛೇರಿಗಳಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಕಛೇರಿಗೆ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ,(ಪ್ರಭಾರ)
ಕವಿಪ್ರನಿನಿ & ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.